ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ /236 /2022–23 ದಿನಾಂಕ:03.10.2022.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

ವಿಷಯ: ದಿನಾಂಕ: 03.10.2022 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 03.10.2022 ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/236/2022–23 ದಿನಾಂಕ: 03.10.2022.

ದಿನಾಂಕ 03.10.2022 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳ | ಸಭಾಧ್ಯಕ್ಷರು |
| 2. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 3. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 4. | ಶ್ರಿ. ಕೆ. ಶಿವಣ್ಣ | ಸದಸ್ಯರು |
| 5. | ಡಾ. ಗುರುನಾಥರಾವ್ ವೈದ್ಯ | ಸದಸ್ಯರು |
| 6. | ಡಾ. ಅನೇಸಿಯಾ | ಸದಸ್ಯರು |
| 7. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 8. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 9. | ಡಾ. ಆರ್. ಕೆ. ಚಂದ್ರನಾಥ್ | ಸದಸ್ಯರು |
| 10. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 11. | ಪ್ರೊ. ಎಸ್. ಹರಿಪ್ರಸಾದ್ | ಸದಸ್ಯರು |
| 12. | ಡಾ:ವಿ. ಲೋಕೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 13. | ಶ್ರೀ ಸಿ ಎನ್ ಶ್ರೀಧರ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿ ಕೊಡಲು ಮಾನ್ಯ ಕುಲಪತಿಗಳಿಗೆ ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರಿಗೆ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಸೂಚಿಸಿದರು. ಅದರಂತೆ ಕುಲಸಚಿವರು ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

ವಿಷಯ ಸಂಖ್ಯೆ: 1

ವಿಷಯ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ದಿನಾಂಕ 30.09.2022 ಪತ್ರದಲ್ಲಿ ನೀಡಿರುವ ನಿರ್ದೇಶನದ ಪ್ರಕಾರ ದಿನಾಂಕ 17.09.2022 ರಂದು ಜರುಗಿದ ಸಿಂಡಿಕೇಟ್ ಸಭೆ ಕಾರ್ಯಸೂಚಿ ವಿಷಯ ಸಂಖ್ಯೆ 05 ರಲ್ಲಿ ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿ ಸಂಸ್ಥೆಯ ವಿದ್ಯಾರ್ಥಿಗಳ ಪರೀಕ್ಷೆ ನಡೆಸಿರುವ ಮತ್ತು ಅಂಕಪಟ್ಟಿ ವಿತರಿಸುವ ಕುರಿತು ರಿಟ್ ಅರ್ಜಿ ಸಂಖ್ಯೆ 3888/2022(EDN-RES) ರಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ದಿನಾಂಕ 18.08.2022 ರಂದು ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ತೆಗೆದುಕೊಂಡ ನಿರ್ಣಯವನ್ನು ಮರು ಪರಿಶೀಲಿಸಿ ಪುನರಾವಲೋಕಿಸುವ ಕುರಿತು

ಉಲ್ಲೇಖ: ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ರವರ ಪತ್ರ ಸಂಖ್ಯೆ ಇಡಿ 317 ಯುಬಿವಿ 2022 ದಿನಾಂಕ:30.09.202

<u>ಪರಾಮರ್ಶಕ ಟಿಪ್ಪಣಿ:</u>

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರು ದಿನಾಂಕ 17.09.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ವಿಷಯ ಸಂಖ್ಯೆ 05 ರಲ್ಲಿ ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿ ಸಂಸ್ಥೆಯ ವಿದ್ಯಾರ್ಥಿಗಳ ಪರೀಕ್ಷೆ ನಡೆಸಿ ಅಂಕಪಟ್ಟಿಗಳನ್ನು ವಿತರಿಸುವ ಕುರಿತು ರಿಟ್ ಅರ್ಜಿ ಸಂಖ್ಯೆ 3888/2022(EDN-RES) ರಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ದಿನಾಂಕ 18.08.2022 ರಂದು ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ತೆಗೆದುಕೊಂಡ ನಿರ್ಣಯವನ್ನು ಮರು ಪರಿಶೀಲಿಸಿ ಪುನರಾವಲೋಕಿಸಲು ನಿರ್ದೇಶನ ನೀಡಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 28(3) ಪ್ರಕಾರ ಸರ್ಕಾರದ ನಿರ್ದೇಶನಗಳನ್ನು ಪಾಲಿಸುವುದು ಆಜ್ಞಾಪಕವಾಗಿರುತ್ತದೆ ಎಂದು ತಿಳಿಸಿದ್ದಾರೆ. ಇದಲ್ಲದೆ 2022-23ನೇ ಸಾಲಿನಿಂದ ಕೂಡಲೇ ಪರಿನಿಯಮಗಳನ್ನು ರಚಿಸಿಕೊಂಡು ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಪ್ರಕಾರ ಎಲ್ಲಾ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸಲು ಅಗತ್ಯ ಕ್ರಮವಹಿಸುವಂತೆ ನಿರ್ದೇಶನ ನೀಡಿರುತ್ತಾರೆ.

ದಿನಾಂಕ 17.09.2022 ರ ಸಿಂಡಿಕೇಟ್ ಸಭೆಯಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ, ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿ ಸಂಸ್ಥೆಯು ಸಲ್ಲಿಸಿದ W.P. No. 3888/2022 (EDN-RES) ರಲ್ಲಿ ದಿನಾಂಕ; 18.08.2022 ರಂದು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ನಿರ್ಣಯಿಸಿದ ಪ್ರಕಾರವಾಗಿ ಕ್ರಮವಹಿಸಲಾಗಿದೆ.

ಸರ್ಕಾರದ ಉಲ್ಲೇಖಿತ ಪತ್ರದಲ್ಲಿ ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿ ಸಂಸ್ಥೆಗೆ ಪರೀಕ್ಷೆ ನಡೆಸಲು ಅವಕಾಶವನ್ನು ನೀಡಿ 2018–19 ಹಾಗೂ 2019–20ನೇ ಶೈಕ್ಷಣಿಕ ವರ್ಷಗಳಲ್ಲಿ ಅಂಕಪಟ್ಟಿಗಳನ್ನು ವಿತರಿಸಿದ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ತಾನೇ ರೂಪಿಸಿಕೊಂಡ ಕ್ರಮವ್ಯವಸ್ಥೆ ಹಾಗೂ ಕಾರ್ಯನೀತಿಯಿಂದ ಹಿಂದೆ ಸರಿದಿರುವುದಕ್ಕೆ ಯಾವುದೇ ಆಧಾರ ಮತ್ತು ಕಾನೂನಾತ್ಮಕ ಸಮರ್ಥನೆ ಲಭ್ಯವಾಗಿರುವುದಿಲ್ಲ. ಸರ್ಕಾರದಿಂದ ಸೂಚಿಸಲಾಗಿದ್ದರೂ ಸಹ ತನ್ನದೇ ಆದ ಪರಿನಿಯಮಗಳನ್ನು ರಚಿಸಿಕೊಳ್ಳದೇ ಹಾಗೂ ತಿಳುವಳಿಕೆ ಒಡಂಬಡಿಕೆ ಮಾಡಿಕೊಳ್ಳದೆ ವಿಳಂಬ ಹಾಗೂ ಉದಾಸೀನ ಧೋರಣೆಯನ್ನು ಅನುಸರಿಸಿರುವುದು ದಿಟವಾಗುತ್ತದೆ. ಆದುದರಿಂದ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಾಗಿರುವುದಿಲ್ಲವೆಂದು ತಿಳಿಸಿದ್ದಾರೆ. ಒಂದು ವೇಳೆ ಸಂಸ್ಥೆಯವರು ವಿಶ್ವವಿದ್ಯಾನಿಲಯದ ನಿಯಮ, ಕ್ರಮ ವಿಧಾನ, ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಲೋಪ ಎಸಗಿದ್ದರೆ ಅವರ ವಿರುದ್ಧ ದಂಡನೇ ವಿಧಿಸಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಮುಕ್ತ ಅವಕಾಶ ಹೊಂದಿರುತ್ತದೆ ಎಂದು ತಿಳಿಸಿದ್ದಾರೆ.

ಯು.ಜಿ.ಸಿ. ಮಾರ್ಗಸೂಚಿ ಸಂಖ್ಯೆ F.1-19/2005 (CPP-II) ದಿನಾಂಕ 16.02.2009 ರಲ್ಲಿ UGC (Grant of Degrees and Other Awards by the Universities) Regulations 2008 ರಲ್ಲಿ ಎಲ್ಲ ವಿಶ್ವವಿದ್ಯಾಲಯಗಳಿಗೆ ನೀಡಿರುವ ಕೆಳಕಂಡ ನಿರ್ದೇಶನಗಳನ್ನು ಪ್ರಸ್ತಾಪಿಸಿದ್ದಾರೆ.

3.1 To ensure that each University Grants degrees and other awards to its eligible students regularly in every academic year;

3.2 To facilitate timely holding of convocation or adopting any other method, for conferring the degree/ other awards to eligible students at each University;

3.3 To assist the Eligible student going for employment, higher studies and / or other opportunities, by giving their degrees and other without delay;

3.4 To enhance the quality and standard of the University concerned, through its strict adheres to the Academic calendar announced in advance;

3.5 To gain confidence goodwill and respect of stake holders, particularly students, through timely and orderly functioning of the University.

ಮೇಲೆ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯನ್ನು ಏರ್ಪಡಿಸಿ, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ದಿನಾಂಕ 17.09.2022 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಕೈಗೊಳ್ಳಲಾಗಿರುವ ನಿರ್ಣಯವನ್ನು ಮರುಪರಿಶೀಲಿಸಿ ಪುರಾವಲೋಕಿಸಲು ಈ ಮೂಲಕ ತಿಳಿಸಲಾಗಿದೆ ಹಾಗೂ ಸರ್ಕಾರದ ನಿರ್ದೇಶನವನ್ನು ಪಾಲಿಸುವುದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ರ ಪ್ರಕರಣ 28(3) ರನ್ವಯ ಆಜ್ಞಾಪಕವಾಗಿರುವುದನ್ನು

ಗಮನಿಸಬಹುದಾಗಿದೆ. ಮುಂದುವರೆದು, 2022-23ನೇ ಸಾಲಿನಿಂದ ಅನ್ವಯವಾಗುವಂತೆ ಕೂಡಲೇ ಪರಿನಿಯಮಗಳನ್ನು ರಚಿಸಿಕೊಳ್ಳಲು ಹಾಗೂ ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿ ಸಂಸ್ಥೆಯೊಂದಿಗೆ ತಿಳುವಳಿಕೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಹಾಗೂ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಆದೇಶದನ್ವಯ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಿರುತ್ತಾರೆ.

ದಿನಾಂಕ: 13.08.2021 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಅನುಚ್ಛೇಧ 66(1)ರ ಅಡಿಯಲ್ಲಿ ವಿಶೇಷ ಅಧ್ಯಯನ/ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಸರ್ಕಾರಿ/ಖಾಸಗಿ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಸಲುವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಅನುಮೋದಿತ "Recognition of Certain Institution for Specialized Studies/Specialized Studies and Research Studies Statutes 2018" ಪರಿನಿಯಮಗಳನ್ನು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡು ದಿನಾಂಕ: 02.09.2021ರಂದು ಅಧಿಸೂಚನೆ ಹೊರಡಿಸಲಾಗಿದೆ.

ಸರ್ಕಾರ 2018-19 ಮತ್ತು 2019-20 ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಪ್ರವೇಶಗಳ ಅನುಮೋದನೆ ಹಾಗೂ ಅರ್ಹ ವಿದ್ಯಾರ್ಥಿಗಳ ಎಲ್ಲ ವ್ಯಾಸಂಗಗಳ ಪರೀಕ್ಷೆಗಳ ಅಂಕಪಟ್ಟಿಗಳನ್ನು ವಿತರಿಸಲು ಹಾಗೂ 2022-23 ನೇ ಸಾಲಿನಿಂದ ಪರಿನಿಯಮ ರಚಿಸಿಕೊಳ್ಳಲು ಹಾಗೂ ಸಂಸ್ಥೆಯ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲು ಸೂಚಿಸಿರುತ್ತಾರೆ.

ಸರ್ಕಾರದ ನಿರ್ದೇಶನಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಯಿತು.

**ವಿವರಣೆ**

ಮಾನ್ಯ ಸದಸ್ಯರಾದ ಶ್ರೀ ಕೆ ಶಿವಣ್ಣ, ಡಾ. ಆರ್ ಕೆ. ಚಂದ್ರನಾಥ್, ಡಾ. ಗುರುನಾಥರಾವ್ ವೈದ್ಯ, ಶ್ರೀ ಟಿ. ಹೆಚ್. ಶ್ರೀನಿವಾಸಯ್ಯರವರು ಚರ್ಚೆಯಲ್ಲಿ ಭಾಗವಹಿಸಿ, ಸರ್ಕಾರದ ನಿರ್ದೇಶನದ ಹಿನ್ನೆಲೆಯಲ್ಲಿ, ಹಿಂದಿನ ಸಿಂಡಿಕೇಟ್ ಸಭೆ ರಿಟ್ ಅಪೀಲ್ ಸಲ್ಲಿಸಲು ತೆಗೆದುಕೊಂಡ ತೀರ್ಮಾನವನ್ನು ಹಿಂದಕ್ಕೆ ಪಡೆದು ಉಚ್ಚನ್ಯಾಯಾಲಯದ ತೀರ್ಮಾನ ಹಾಗೂ ಸರ್ಕಾರದ ಸೂಚನೆಗಳನ್ನು ಪಾಲಿಸುವುದು ಸಮಂಜಸವೆಂದು ತಿಳಿಸಿದರು. ಸರ್ಕಾರ ತನ್ನ ಪತ್ರದಲ್ಲಿ, ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿ ಸಂಸ್ಥೆಯು ಲೋಪಗಳನ್ನು ಎಸಗಿದ್ದಲ್ಲಿ, ಸದರಿ ಸಂಸ್ಥೆಯ ವಿರುದ್ಧ ದಂಡನೆಗಳನ್ನು ವಿಧಿಸಲು ವಿಶ್ವವಿದ್ಯಾನಿಲಯಕ್ಕೆ ಅವಕಾಶವಿದೆ ಎಂದು ತಿಳಿಸಿದ್ದಾರೆ. ಕಾರಣ ಸಂಸ್ಥೆಯಿಂದ ಲೋಪಗಳು ಏನಾದರೂ ಆಗಿದ್ದಲ್ಲಿ, ಆ ಕುರಿತು ದಂಡ ವಿಧಿಸಲು ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಹೆಚ್.ಎನ್. ಹರಿಪ್ರಸಾದ, ಚರ್ಚೆಯಲ್ಲಿ ಭಾಗವಹಿಸಿ, ಸರ್ಕಾರದ ನಿರ್ದೇಶನ ಪಾಲಿಸುವ ಸದಸ್ಯರ ಇಂಗಿತಕ್ಕೆ ಸಹಮತ ವ್ಯಕ್ತಪಡಿಸಿ, ಉಚ್ಚನ್ಯಾಯಲಯದ 18.08.2022 ತೀರ್ಮಾನದಲ್ಲಿ ಮತ್ತು ಸರ್ಕಾರದ ಪತ್ರದಲ್ಲಿ ವಿಶ್ವವಿದ್ಯಾಲಯದ ಕಾರ್ಯನೀತಿ ಹಾಗೂ ಕ್ರಮ ವ್ಯವಸ್ಥೆ ಕುರಿತಂತೆ ಗಂಭೀರವಾದ ಆರೋಪಗಳನ್ನು ಮಾಡಲಾಗಿದ್ದು, ಯಾವುದೇ ತೀರ್ಮಾನ ಕೈಗೊಳ್ಳುವ ಪೂರ್ವದಲ್ಲಿ ಈ ವಿಷಯವನ್ನು ಪರಿಗಣಿಸಿ ಎಸಗಲಾದ ಲೋಪಗಳ ಕುರಿತು ಅಗತ್ಯ ತನಿಖೆ ಆಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸದಸ್ಯರಾದ ಶ್ರೀ ಸಮರ್ಥ ಮುನಿರಾಜು ಈ ಸಲಹೆಗೆ ತಮ್ಮ ಸಹಮತ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪನವರು ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿ ಸಂಸ್ಥೆಯವರು 2018-19 ಮತ್ತು 2019-20 ವರ್ಷದ ವಿದ್ಯಾರ್ಥಿಗಳಲ್ಲದೆ ಇನ್ನೂ ಬೇರೆ ವಿದ್ಯಾರ್ಥಿಗಳು ಇದ್ದರೆ, ಆ ಕುರಿತು ಸೂಕ್ತ ತೀರ್ಮಾನ ಕೈಗೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಈ ಪ್ರಕರಣದ ಕುರಿತು ಸವಿಸ್ತಾರವಾಗಿ ಸಭೆಗೆ ವಿವರಿಸಿ, ಸಂಸ್ಥೆಯವರು 2018-19, 2019-20 ಮತ್ತು 2020-21 ರಲ್ಲಿ ಪ್ರವೇಶ ನೀಡಿದ ವಿದ್ಯಾರ್ಥಿಗಳಿಗೆ ಅವರು ಸಂಬಂಧಿಸಿದ ವ್ಯಾಸಂಗದ ಮುಂದಿನ ಸೆಮಿಸ್ಟರ್‌ಗಳ ಪರೀಕ್ಷೆಗಳು ಕುರಿತಂತೆ ಕ್ರಮಕೈಕೊಳ್ಳಬೇಕಾಗಿದೆ. ಈ ಪ್ರಕರಣದ ವಿವರಗಳನ್ನು ಕಾಲಕಾಲಕ್ಕೆ ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಗಿದೆ ಹಾಗೂ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಕ್ರಮಿಸಲಾಗಿದೆ. ದಿನಾಂಕ 27.06.2019 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆ, ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿ ಸಂಸ್ಥೆಯವರು ವಿಶ್ವವಿದ್ಯಾನಿಲಯದ ಅನುಮತಿಯಿಲ್ಲದೆ ಪರೀಕ್ಷೆಗಳನ್ನು ನಡೆಸಿ ಫಲಿತಾಂಶಗಳನ್ನು ಪ್ರಕಟಿಸಿರುವುದನ್ನು ಗಂಭೀರವಾಗಿ ಪರಿಗಣಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಲೋಪದೋಷಗಳನ್ನು ಮನ್ನಿಸಿ, ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸ್ವೀಕರಿಸಲು ಘಟನೋತ್ತರ ಅನುಮೋದನೆಯನ್ನು ನೀಡಿರುವುದನ್ನು ಹಾಗೂ ತದನಂತರ ದಿನಾಂಕ 16.06.2021 ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವರು(ಮೌಲ್ಯಮಾಪನ) ರವರ ಅಧ್ಯಕ್ಷತೆಯಲ್ಲಿ ಸಂಸ್ಥೆಯವರು ಪರೀಕ್ಷೆಗಳನ್ನು ನಡೆಸಿ ಫಲಿತಾಂಶಗಳನ್ನು ಪ್ರಕಟಿಸಿರುವುದನ್ನು ಪರಿಶೀಲಿಸಲು ರಚಿಸಲಾದ ಉಪಸಮಿತಿ, ಆರು ತಿಂಗಳುಗಳ ನಂತರ ಒಂದು ಪುಟದ ವರದಿ ಸಲ್ಲಿಸಿ, ಸಂಸ್ಥೆ ಜರುಗಿಸಿದ ಪರೀಕ್ಷೆಗಳನ್ನು ಪರಿಗಣಿಸದೆ, ವಿದ್ಯಾರ್ಥಿಗಳಿಗೆ ವಿತರಿಸಲಾದ ಅಂಕಪಟ್ಟಿಗಳನ್ನು ಹಿಂದಕ್ಕೆ ಪಡೆದು ವಿಶ್ವವಿದ್ಯಾನಿಲಯದ ವತಿಯಿಂದ ಪರೀಕ್ಷೆಗಳನ್ನು ಪುನಃ ನಡೆಸುವ ತೀರ್ಮಾನಗಳ ವೈರುಧ್ಯವನ್ನು ತಿಳಿಸಿ ದಿನಾಂಕ 17.09.2022 ರ ಸಿಂಡಿಕೇಟ್ ಸಭೆ ನ್ಯಾಯಾಲಯದ ತೀರ್ಪಿನ ಸಂಬಂಧ ರಿಟ್ ಮೇಲ್ಮನವಿ ಸಲ್ಲಿಸಲಾಗಿದೆ ಹಾಗೂ ಈ ಕುರಿತು ಭಾಗಶಃ ಮುಂಗಡ ಶುಲ್ಕ ವಕೀಲರ ಕೋರಿಕೆ ಮೇಲೆ ನೀಡಲಾಗಿದೆ ಎಂದು ಸಭೆಗೆ ತಿಳಿಸಿ, ಮಾನ್ಯ ಉಚ್ಚನ್ಯಾಯಲಯದ ತೀರ್ಮಾರ್ನದಂತೆ ನಾಲ್ಕು ವಾರಗಳಲ್ಲಿ ಕ್ರಮವಹಿಸಬೇಕಾಗಿದೆ. ಘನ ನ್ಯಾಯಾಲಯ ವಿಶ್ವವಿದ್ಯಾನಿಲಯದ ಕರ್ತವ್ಯ ನಿರ್ವಹಣೆ ಬಗ್ಗೆ ಕಟುವಾಗಿ ಗಮನಿಸಿರುವುದನ್ನು ಹಾಗೂ ಸರ್ಕಾರವು ಈ ಅಂಶದ ಬಗ್ಗೆ ಗಂಭಿರವಾಗಿ ಗಮನ ಸೆಳೆದಿರುವುದನ್ನು ಸಭೆಯ ಗಮನಕ್ಕೆ ತಂದರು ಹಾಗೂ ನ್ಯಾಯಾಲಯದ ತೀರ್ಪನ್ನು ಅನುಷ್ಠಾನಗೊಳಿಸುವಂತೆ ವಿದ್ಯಾರ್ಥಿಗಳಿಂದ, ಪೋಷಕರಿಂದ ಹಾಗೂ ಸೃಷ್ಠಿ ಸಂಸ್ಥೆಯಿಂದ ಮನವಿಗಳು ಬರುತ್ತಿದ್ದು ಯು.ಜಿ.ಸಿ ಸಹ ಈ ಸಂಬಂಧ ಗಮನ ಹರಿಸಲು ವಿಶ್ವವಿದ್ಯಾನಿಲಯಕ್ಕೆ ಸೂಚಿಸಿರುತ್ತಾರೆಂದು ತಿಳಿಸಿದರು. ಮುಂದುವರೆದು ಮೈಸೂರು ವಿಶ್ವವಿದ್ಯಾಲಯದ ಪರಿನಿಯಮ ಹಾಗೂ ಒಡಂಬಡಿಕೆ ಅನುಸಾರ, ಈವರೆಗಿನ ಪ್ರವೇಶಾತಿ ಹಾಗೂ ಪರೀಕ್ಷೆ, ಫಲಿತಾಂಶ, ಅಂಕಪಟ್ಟಿ, ಸರ್ಟಿಫಿಕೇಟ್ ವಿತರಣೆಯ ಸಂಬಂಧ ಕ್ರಮವಹಿಸಬೇಕಾಗಿದೆ ಎಂದು ತಿಳಿಸಿದರು. 2022-23ನೇ ಸಾಲಿನಿಂದ ಸಂಸ್ಥೆ ಬಯಸಿದ್ದಲ್ಲಿ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡ ದಿನಾಂಕ 02.09.2021 ರಂದು ಅಧಿಸೂಚನೆ ಮೂಲಕ ಜಾರಿಗೊಳಿಸಲಾಗಿರುವ "Recognition of Certain Institution for Specialized Studies/Specialized Studies and Research Studies Statutes 2018" ಅನುಸಾರ

ಕ್ರಮವಹಿಸಬಹುದಾಗಿದೆ ಎಂದು ತಿಳಿಸಿದರು. ಈ ಅಂಶವನ್ನು ಸರ್ಕಾರ ಹಾಗೂ ನ್ಯಾಯಾಲಯ ಗಮನಕ್ಕೆ ಮತ್ತೊಮ್ಮೆ ತರವುದರ ಬಗ್ಗೆಯು ತಿಳಿಸಿದರು. ಈ ನಿಟ್ಟಿನಲ್ಲಿ ನ್ಯಾಯಾಲಯದ ಈ ಅಂಶ ಹಾಗೂ ಸರ್ಕಾರದ ನಿರ್ದೇಶನ ಈಗಾಗಲೇ ಈಡೇರಿಸಲಾಗಿದೆ. ಅರ್ಹ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್‌ಗಳನ್ನು ನೀಡುವ ಸಂಬಂಧ ಅನುಸರಿಸಬೇಕಾದ ಕ್ರಮಗಳು ಹಾಗೂ ಉಪಕ್ರಮಗಳ ಬಗ್ಗೆ ವಿವರಿಸಿ ಆಡಳಿತ ಮಂಡಳಿಯನ್ನು (ಮ್ಯಾನೇಜಿಂಗ್ ಕೌನ್ಸಿಲ್) ನಿಯಾಮಾನುಸಾರ ಪುನರ್ ರಚಿಸಿ ಕ್ರಮ ಕೈಕೊಳ್ಳಬೇಕಾದ ಅಂಶದ ಬಗ್ಗೆಯು ವಿವರಿಸಿದರು.

ಮಾನ್ಯ ಸದಸ್ಯರ ಅಭಿಪ್ರಾಯಗಳಂತೆ ಕೆಳಕಂಡ ಮೂರು ತೀರ್ಮಾನಗಳನ್ನು ಕೈಗೊಳ್ಳಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಿಂಡಿಕೇಟ್ ತೀರ್ಮಾನ:

ಚರ್ಚೆ ನಂತರ ಸರ್ವಾನುಮತದಿಂದ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

1. ಸರ್ಕಾರದ ನಿರ್ದೇಶನವನ್ನು ಒಪ್ಪಿಕೊಂಡು ದಿನಾಂಕ 17.09.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ, ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 3888/2022 (EDN-RES) ರಲ್ಲಿ ದಿನಾಂಕ 18.08.2022 ರಂದು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ನೀಡಿದ ತೀರ್ಮಾನದ ವಿರುದ್ಧ ರಿಟ್ ಅಪೀಲ್ ಸಲ್ಲಿಸಲು ತೆಗೆದುಕೊಂಡ ತೀರ್ಮಾನವನ್ನು ಹಿಂದಕ್ಕೆ ಪಡೆಯಲು ನಿರ್ಣಯಿಸಲಾಯಿತು.
2. ರಿಟ್ ಅರ್ಜಿ ಸಂಖ್ಯೆ 3888/2022(EDN-RES) ರಲ್ಲಿ ಮಾನ್ಯ ಉಚ್ಚನ್ಯಾಯಾಲಯ ದಿನಾಂಕ 18.08.2022 ರಂದು ನೀಡಿದ ತೀರ್ಮಾನವನ್ನು ಒಪ್ಪಿಕೊಂಡು ಜಾರಿಗೊಳಿಸಲು ತೀರ್ಮಾನಿಸಲಾಯಿತು.
3. ಈ ಕುರಿತು ಕಾಲಕಾಲಕ್ಕೆ ಕೈಗೊಳ್ಳಬೇಕಾದ ಆಡಳಿತಾತ್ಮಕ ಕ್ರಮಗಳು ಹಾಗೂ ಉಪಕ್ರಮಗಳು ಕುರಿತು ಅಗತ್ಯ ತೀರ್ಮಾನಗಳನ್ನು ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕುಲಸಚಿವರು

ಕುಲಪತಿಗಳು

ಕ್ರಮವಹಿಸಬಹುದಾಗಿದೆ ಎಂದು ತಿಳಿಸಿದರು. ಈ ಅಂಶವನ್ನು ಸರ್ಕಾರ ಹಾಗೂ ನ್ಯಾಯಾಲಯ ಗಮನಕ್ಕೆ ಮತ್ತೊಮ್ಮೆ ತರವುದರ ಬಗ್ಗೆಯು ತಿಳಿಸಿದರು. ಈ ನಿಟ್ಟಿನಲ್ಲಿ ನ್ಯಾಯಾಲಯದ ಈ ಅಂಶ ಹಾಗೂ ಸರ್ಕಾರದ ನಿರ್ದೇಶನ ಈಗಾಗಲೇ ಈಡೇರಿಸಲಾಗಿದೆ. ಅರ್ಹ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್‌ಗಳನ್ನು ನೀಡುವ ಸಂಬಂಧ ಅನುಸರಿಸಬೇಕಾದ ಕ್ರಮಗಳು ಹಾಗೂ ಉಪಕ್ರಮಗಳ ಬಗ್ಗೆ ವಿವರಿಸಿ ಆಡಳಿತ ಮಂಡಳಿಯನ್ನು (ಮ್ಯಾನೇಜಿಂಗ್ ಕೌನ್ಸಿಲ್) ನಿಯಾಮಾನುಸಾರ ಪುನರ್ ರಚಿಸಿ ಕ್ರಮ ಕೈಕೊಳ್ಳಬೇಕಾದ ಅಂಶದ ಬಗ್ಗೆಯು ವಿವರಿಸಿದರು.

ಮಾನ್ಯ ಸದಸ್ಯರ ಅಭಿಪ್ರಾಯಗಳಂತೆ ಕೆಳಕಂಡ ಮೂರು ತೀರ್ಮಾನಗಳನ್ನು ಕೈಗೊಳ್ಳಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಿಂಡಿಕೇಟ್ ತೀರ್ಮಾನ:

**ಚರ್ಚೆ ನಂತರ ಸರ್ವಾನುಮತದಿಂದ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.**

1. **ಸರ್ಕಾರದ ನಿರ್ದೇಶನವನ್ನು ಒಪ್ಪಿಕೊಂಡು ದಿನಾಂಕ 17.09.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ, ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 3888/2022 (EDN-RES) ರಲ್ಲಿ ದಿನಾಂಕ 18.08.2022 ರಂದು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ನೀಡಿದ ತೀರ್ಮಾನದ ವಿರುದ್ಧ ರಿಟ್ ಅಪೀಲ್ ಸಲ್ಲಿಸಲು ತೆಗೆದುಕೊಂಡ ತೀರ್ಮಾನವನ್ನು ಹಿಂದಕ್ಕೆ ಪಡೆಯಲು ನಿರ್ಣಯಿಸಲಾಯಿತು.**
2. **ರಿಟ್ ಅರ್ಜಿ ಸಂಖ್ಯೆ 3888/2022(EDN-RES) ರಲ್ಲಿ ಮಾನ್ಯ ಉಚ್ಚನ್ಯಾಯಾಲಯ ದಿನಾಂಕ 18.08.2022 ರಂದು ನೀಡಿದ ತೀರ್ಮಾನವನ್ನು ಒಪ್ಪಿಕೊಂಡು ಜಾರಿಗೊಳಿಸಲು ತೀರ್ಮಾನಿಸಲಾಯಿತು.**
3. ಈ ಕುರಿತು ಕಾಲಕಾಲಕ್ಕೆ ಕೈಗೊಳ್ಳಬೇಕಾದ ಆಡಳಿತಾತ್ಮಕ ಕ್ರಮಗಳು ಹಾಗೂ ಉಪಕ್ರಮಗಳು ಕುರಿತು ಅಗತ್ಯ ತೀರ್ಮಾನಗಳನ್ನು ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು